ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-2, September-October 2025, Pp. 80-85
©*IIMRD*, Mysuru

IIMRD JOURNALS
www.iimrd.com

# ಕುವೆಂಪು ಅವರ ಆತ್ಮಕಥೆಯಲ್ಲಿನ ಸಾಮಾಜಿಕ ಪ್ರಜ್ಞೆ

**ಡಾ. ಸಾಬಣ್ಣ**
ತಾತ್ಕಾಲಿಕ ಅಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿಸ್ತರಣಾ ಕೇಂದ್ರ ದೇವದುರ್ಗ.

**ಸಾರಾಂಶ: (Abstract)**

*ಕುವೆಂಪು ಅವರ ಆತ್ಮಕಥೆಯಾದ 'ನೆನಪಿನ ದೋಣಿಯು' ಸಾಮಾಜಿಕ ಪ್ರಜ್ಞೆಯನ್ನು ಆಳವಾಗಿ ಬಿಂಬಿಸುತ್ತದೆ. ಇದರಲ್ಲಿ ಸಾಮಾಜಿಕ ಪರಿಕಲ್ಪನೆಗಳಾದ ಮಾನವೀಯತೆ, ಜಾತಿವ್ಯವಸ್ಥೆಯ ವಿರೋಧ, ಮತ್ತು ಸಮಾನತೆಯನ್ನು ಎತ್ತಿ ತೋರಿಸುತ್ತದೆ. ಈ ಆತ್ಮಕಥೆಯಲ್ಲಿ, ಅವರು ತಮ್ಮ ಬದುಕಿನ ಅನುಭವಗಳನ್ನು ವಿವರಿಸುತ್ತಾ, ಸಾಮಾಜಿಕ ಬದಲಾವಣೆ ಮತ್ತು ಪ್ರಗತಿಯ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಅವರು ವಿಶ್ವಮಾನವ ತತ್ವದ ಮೂಲಕ ಸಮಾಜದಲ್ಲಿ ಸಮಾನತೆ ಮತ್ತು ಸಹೋದರತ್ವವನ್ನು ಸ್ಥಾಪಿಸಲು ಚಿಂತಿಸಿದ್ದಾರೆ.*

**ಮುಖ್ಯಪದಗಳು (Keywords):** *ಕುವೆಂಪು, ನೆನಪಿನ ದೋಣಿಯಲ್ಲಿ, ಶಿಕ್ಷಣದ ಪ್ರಭಾವ, ಸಮಾನತೆ, ಮಾನವೀಯತೆ.*

**ಪೀಠಿಕೆ**

'ನೆನಪಿನ ದೋಣಿ' ಕೃತಿಯಲ್ಲಿ ವ್ಯಕ್ತಿಗತ ನೆನಪುಗಳ ಹಿಂದೆ ಆಧುನಿಕ ಭಾರತದಲ್ಲಿನ ಒಂದು ಸಮಾಜದ ಮೌಲ್ಯಗಳು, ನಿಯಮಗಳು, ಬದಲಾಗುತ್ತಿರುವ ಸಂಸ್ಕೃತಿ ಮತ್ತು ಶೈಕ್ಷಣಿಕ, ಜಾತ್ಯಾತೀತ ದೃಷ್ಟಿಕೋನಗಳು ಒಳಗೊಂಡಿವೆ. ಇದು ಕೇವಲ ವ್ಯಕ್ತಿಯ ಆತ್ಮಕಥೆ ಅಲ್ಲ, ಒಂದು ಕಾಲಘಟ್ಟದ ಸಾಮಾಜಿಕ ದಾಖಲೆ ಕೂಡಾ ಹೌದು. ೨೦ನೇ ಶತಮಾನಗಳ ಸಮಾಜದ ಅನೇಕ ಮುಖಗಳನ್ನು ಪ್ರತಿಬಿಂಬಿಸುತ್ತದೆ.

ಕುವೆಂಪು ಅವರ 'ನೆನಪಿನ ದೋಣಿ' ಆತ್ಮಕಥೆಯಲ್ಲಿನ ಸಾಮಾಜಿಕವಾದ ಅಂಶಗಳು ಬಹುಪಾಲು ಕುಟುಂಬ, ಶಿಕ್ಷಣ ಮತ್ತು ಬರಹದ ಸಂದರ್ಭಗಳನ್ನು ವಿಶ್ಲೇಷಿಸಲು ಸಾಧ್ಯ. ಈ ಆತ್ಮಕಥೆ ಅವರ ವ್ಯಕ್ತಿಗತ ಅನುಭವಗಳು ಅಷ್ಟೇ ಅಲ್ಲದೆ ಅವರ ಕಾಲಘಟ್ಟದ ಸಾಮಾಜಿಕ ಪರಿಸ್ಥಿತಿಗಳ ಪ್ರತ್ಯಕ್ಷ ಪ್ರತಿಬಿಂಬವೂ ಹೌದು. ಕುವೆಂಪು ಅವರ ಕಾಲದಲ್ಲಿ ಜಾತಿ ವ್ಯವಸ್ಥೆ ಹಾಗೂ ಬ್ರಾಹ್ಮಣಿಕ ಆದಿಪತ್ಯವು ಬಲವಾಗಿತ್ತು. ಆತ್ಮಕಥೆಯಲ್ಲಿ ಅವರು ತಮ್ಮ ಬಾಲ್ಯ ಶಿಕ್ಷಣದ ದಿನಗಳಲ್ಲಿಯ ಜಾತಿಭೇದದ ಅನುಭವಗಳನ್ನು ಶುದ್ಧಾಚಾರ, ಅಶುದ್ಧತೆ, ಆಹಾರ ಸಂಸ್ಕೃತಿಗಳ ಮೂಲಕ ಈ ಜಾತಿಯ ಬೇಧವನ್ನು ಚಿತ್ರಿಸುತ್ತಾರೆ. ಕುವೆಂಪು ಶಾಲೆ ಮತ್ತು ಮಹಾವಿದ್ಯಾಲಯದ ಜೀವನದ ಅನುಭವಗಳನ್ನು ವಿವರಿಸುವಾಗ ತಮ್ಮ ಕಾಲದ ಶಿಕ್ಷಣ ವ್ಯವಸ್ಥೆಯ ಮಟ್ಟ, ಗುರುಗಳ ಪ್ರಭಾವ, ಪಾಠಶಾಲೆಗಳ ವ್ಯವಸ್ಥೆಯ ಕುರಿತು ವಿವರಿಸುತ್ತಾರೆ. "ನನ್ನ ಆಪ್ತ ಸ್ನೇಹಿತರಲ್ಲಿ

*Please cite this article as:* ಸಾಬಣ್ಣ. (2025). ಕುವೆಂಪು ಅವರ ಆತ್ಮಕಥೆಯಲ್ಲಿನ ಸಾಮಾಜಿಕ ಪ್ರಜ್ಞೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(2). ಪು.ಸಂ.* 80–85

ಬ್ರಾಹ್ಮಣರಿದ್ದರು, ವೈಶ್ಯರಿದ್ದರು, ಮುಸಲ್ಮಾನರಿದ್ದರು, ಕ್ರೈಸ್ತರಿದ್ದರು, ಶೂದ್ರರ ಬೇರೆಬೇರೆ ಪಂಗಡಗಳವರೂ ಇದ್ದರು. ನನಗೆ ಜಾತೀಯತಾ ದೃಷ್ಟಿಯಿಂದ ನೋಡುವ ಮನೋಧರ್ಮವೆ ಲುಪ್ತವಾಗಿತ್ತು, ಭಾವನೆಯಲ್ಲಿ ಮಾತ್ರವಲ್ಲ, ನಿಜವರ್ತನೆಯಲ್ಲಿಯೂ. ಆ ಮತದವರು ಈ ಮತದವರು ಎಂಬ ಭೇದವಿಲ್ಲದೆ ಎಲ್ಲರೊಡನೆಯೂ ಕುಳಿತು ಊಟ ತಿಂಡಿ ಮಾಡುತ್ತಿದ್ದೆ."[೧] ಲೇಖಕರು ಯಾವುದೇ ಜಾತಿ ತಾರತಮ್ಯವನ್ನು ಮಾಡದೆ ಎಲ್ಲಾ ವರ್ಗದವರೊಂದಿಗೆ ಅನ್ನನ್ಯವಾಗಿದ್ದರು. ಅದರೆ ಕುವೆಂಪು ಸಾಹಿತ್ಯ ರಚನೆಯಲ್ಲಿ ತೊಡಗಿ ಉತ್ತಮವಾದ ಕೃತಿಗಳನ್ನು ರಚಿಸಿದಾಗ ಬ್ರಹ್ಮಣರು ಈತನು ಬ್ರಹ್ಮಾಣನೇ ಇರಬೇಕು ಎಂದು ಅಂದುಕೊಂಡಿದ್ದರಂತೆ. "ಅವರ ಪ್ರಕಾರ, ಬ್ರಾಹ್ಮಣ ಜಾತಿಯಲ್ಲಿ ಹುಟ್ಟದವನಿಗೆ ಕಾವ್ಯ ಬರೆಯುವುದು ಸಾಧ್ಯವೇ ಇಲ್ಲ. ಬ್ರಾಹ್ಮಣರ ಮುಂದೆ ತಾವು ಎಲ್ಲದರಲ್ಲಿಯೂ ಕೀಳು ಮತ್ತು ನೀಚರೆಂಬ ಭಾವನೆ ಶೂದ್ರವರ್ಗದಲ್ಲಿ ಶತಮಾನಗಳಿಂದ ಬೇರೂರಿ ಹೋಗಿತ್ತು."[೨] ಎಂದು ಹೇಳಿಕೊಂಡಿದ್ದಾರೆ.

ಸಾಮಾನ್ಯವಾಗಿ ಕುವೆಂಪು ಅವರು ಬೆಳೆದ ಊರಿನ (ಕುಪ್ಪಳಿ) ಸಾಮಾಜಿಕ ಪರಿಸರವು ಅವರ ಸಾಂಸ್ಕೃತಿಕ ಬದುಕು ರೂಪುಗೊಳ್ಳುವಕೆಯಲ್ಲಿ ಪ್ರಮುಖವಾದ ಪಾತ್ರ ವಹಿಸುತ್ತದೆ. 'ನೆನಪಿನ ದೋಣಿ'ಯಲ್ಲಿ ಗ್ರಾಮೀಣ ಬದುಕಿನ ಸರಳತೆ, ಸಹಜತೆ, ಸಂಸ್ಕೃತಿ ಹಾಗೂ ಸಂವಹನದ ಶೈಲಿ ಪ್ರಬಲವಾಗಿ ಚಿತ್ರಿತವಾಗಿವೆ. ಅವರ ಆತ್ಮಕಥೆಯಲ್ಲಿ ಕುಟುಂಬದ ಪ್ರಾಮುಖ್ಯತೆ, ತಂದೆಯ ಶಿಸ್ತು, ತಾಯಿಯ ಭಾವನಾತ್ಮಕ ಸಂಪರ್ಕ ಮತ್ತು ಕುಟುಂಬದ ಸಂಸ್ಕಾರಗಳು ಪ್ರಮುಖ ಸಾಮಾಜಿಕ ಅಂಶಗಳಾಗಿ ಗಮನಕ್ಕೆ ಬರುತ್ತವೆ. ಪಿತೃತ್ವದ ಗಂಭೀರ ನಿಯಮಗಳು ಮತ್ತು ಕುಟುಂಬದೊಳಗಿನ ಸಂಸ್ಕೃತಿ ಹಾಗೂ ಆ ಕಾಡಿನ ಪ್ರಕೃತಿ ದೇವತೆ ತನ್ನನ್ನು ಮಹಾನ್ ಕವಿಯನ್ನಾಗಿ ಮಾಡಲು ಸಾಧ್ಯವಾಯಿತು. ಅದಕ್ಕೆ ಒಂದು ಸಂದರ್ಭವನ್ನು ಇಲ್ಲಿ ಹೇಳಿಕೊಂಡಿದ್ದಾರೆ. "ಕ್ರಿ.ಶ. ೧೯೨೬ನೆಯ ಸಂವತ್ಸರ ನನ್ನ ಜೀವಮಾನದಲ್ಲಿ ಒಂದು ಮಹತ್ತಾದ ಕ್ರಾಂತಿಕಾರಕ ಪರಿವರ್ತನೆಯ ವರ್ಷವಾಗಿದೆ. ನನ್ನ ಬದುಕಿನ ಮಲೆಯ ಕಿರುದೊರೆ ಒಂದು ವಿಶ್ವ ಜೀವನವಾಹಿನಿಯನ್ನು ಸಂಧಿಸಿ ಸಂಗಮಿಸಿದ ಪವಿತ್ರ ವರ್ಷವಾಗಿದೆ ಅದು. ಸಹ್ಯಾದ್ರಿಯ ತುಂಗೆಯ ಅಭೀಪ್ಸೆಗೆ ಓಗೊಟ್ಟು ಹಿಮಾಲಯದ ಗಂಗೆಯ ಅಕ್ಕರೆಯ ಕೃಪೆ ಅದನ್ನು ಆಲಿಂಗಿಸುವ ಮಹದ್ದರ್ಶನವನ್ನಲ್ಲಿ ಎದುರುಗೊಳ್ಳುತ್ತೇವೆ. ಆದರೆ ಆ ಪುಣ್ಯಘಟನೆ ಎಷ್ಟು ನಿರ್ವಿಶಿಷ್ಟವಾಗಿ ಸದ್ದು ಗದ್ದಲವಿಲ್ಲದೆ ಯಃಕಶ್ಚಿತವೊ ಎಂಬಂತೆ ನಡೆಯುತ್ತದೆ ಎಂದರೆ ಅದು ಸಂಭವಿಸಿದಾಗ ನನಗೆ ಅದರ ಅಪೂರ್ವತೆಯಾಗಲಿ ಮಹತ್ತಾಗಲಿ ಕೃಪಾನುಗ್ರಹವಾಗಲಿ ಒಂದಿನಿತೂ ಪ್ರಜ್ಞಾಗೋಚರವಾಗಲಿಲ್ಲ! ಶ್ರೀಗುರುವಾಗಿ ಅವತರಿಸಿದ ಜಗನ್ಮಾತೆ ತನ್ನ ಕಾಡುಮಗುವನ್ನು ಕೈಹಿಡಿದೆತ್ತಿಕೊಳ್ಳದಿದ್ದರೆ ಅದು ಯಾವ ಕಸದ ಡಬ್ಬಿಗೆ ಬಿದ್ದು ಹೇಳ ಹೆಸರಿಲ್ಲದಾಗುತಿತ್ತೋ? ಅನವರತ ಉದ್ಧಾರಾಕಾಂಕ್ಷೆ ಮತ್ತು ನಿರಂತರ ಅಭೀಪ್ಸೆಯ ಪ್ರಾರ್ಥನೆ ವಿನಾ ಅದಕ್ಕಿದ್ದ ಅರ್ಹತೆಯಾದರೂ ಏನು?"[೩] ತನ್ನ ಬೆಳವಣಿಗೆಗೆ ಕಾರಣವಾದ ಈ ನಿಸರ್ಗ ದೇವತೆಯನ್ನು ಮನಸಾರೆ ಕೊಂಡಾಡುತ್ತಾನೆ. ನಿರೀಕ್ಷೆಗಳೂ ಅಲ್ಲಿ ಸ್ಪಷ್ಟವಾಗುತ್ತವೆ. ಕುವೆಂಪು ಅವರ ಜೀವನದಲ್ಲಿ ವೇದಾಂತ, ಉಪನಿಷತ್, ರಾಮಾಯಣ–ಮಹಾಭಾರತದ ಅಧ್ಯಯನ ಪ್ರಮುಖವಾಗಿತ್ತು. ಆದರೆ ಅವರು ಅಂಧವಿಶ್ವಾಸಗಳ ವಿರುದ್ಧವಾಗಿಯೂ ನಿಂತಿರುವ ದೃಷ್ಟಿಕೋನ ನೆನಪಿನ ದೋಣಿಯಲ್ಲಿ ಸ್ಪಷ್ಟವಾಗುತ್ತದೆ. ಇದು ಆ ಕಾಲದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಿಂತನೆಗಳ ಚಿತ್ರಣವನ್ನು ನೀಡುತ್ತದೆ. ಕುವೆಂಪು

ಬಾಲ್ಯದಿಂದಲೇ ಕನ್ನಡ ಭಾಷೆಯ ಮೇಲೆ ಪ್ರೀತಿ ಹೊಂದಿದ್ದರು. ಅವರ ಆತ್ಮಕಥೆಯಲ್ಲಿ ಭಾಷಾ ಸಂಸ್ಕೃತಿಯ ಪ್ರಭಾವ, ಕನ್ನಡ ಸಾಹಿತ್ಯದ ಪ್ರೇರಣೆ ಮತ್ತು ಸಾಹಿತ್ಯದ ಮೂಲಕ ಸಮಾಜಕ್ಕೆ ಸೇವೆ ಸಲ್ಲಿಸಬೇಕೆಂಬ ದೃಷ್ಟಿಕೋನ ಪ್ರಕಟವಾಗುತ್ತದೆ.

ಕುವೆಂಪು ಅವರು ವೈಚಾರಿಕವಾಗಿದ್ದರು ಕೂಡ ಅವರಿಗೆ ಮನೋವಿಚಲಿತರಾದಾಗ ಕುಟುಂಬದವರು ಅವರಿಗೆ ದೆವ್ವ ಹಿಡಿದಿದೆ ಎಂದು ಬಾವಿಸಿದ್ದರು. “ನನಗೆ ಮೈಮೇಲೆ ಬಂದಿರುವುದನ್ನು, ಎಂದರೆ ಭೂತಚೇಷ್ಟೆಯನ್ನು, ಬಿಡಿಸಲು ಏನೇನು ಅಲೌಕಿಕೋಪಾಯಗಳನ್ನು ಕೈಕೊಂಡರೂ ನನಗೆ ತಿಳಿಯದು. ನಿಮಿತ್ತ ಕೇಳಿಸಿರಬಹುದು; ದೇವರಿಗೆ ಕಾಣಿಕೆ ಕಟ್ಟಿರಬಹುದು ತಿರುಪತಿ ಧರ್ಮಸ್ಥಳ ಮೊದಲಾದ ಸ್ಥಾನಗಳಿಗೆ ಹೇಳಿಕೊಂಡಿರಬಹುದು. ಆ ಮೂಢನಂಬಿಕೆಗಳನ್ನೆಲ್ಲ ನಾನು ತಿರಸ್ಕರಿಸುತ್ತೇನೆ ಎಂಬ ಅಂಶವೂ ಮಾನಪ್ಪ, ಮಂಜಪ್ಪಗೌಡರು, ದೊಡ್ಡ ಚಿಕ್ಕಪ್ಪಯ್ಯ ಎಲ್ಲರಿಗೂ ಗೊತ್ತಿದ್ದ ಅಂಶವೆ ಆಗಿತ್ತು. ಆದರೆ ಹಳೆಯ ಸಂಪ್ರದಾಯದಲ್ಲಿಯೇ ಬೆಳೆದಿದ್ದ ದೊಡ್ಡ ಚಿಕ್ಕಪ್ಪಯ್ಯನವರಿಗೆ ನಾನು ನಂಬಲಿ ಬಿಡಲಿ ಅದು ಅಪ್ರಕೃತವಾಗಿತ್ತು. ರೋಗಿಯ ನಂಬಿಕೆ ಅಪನಂಬಿಕೆ ಕಟ್ಟಿಕೊಳ್ಳುತ್ತಾನೆಯೆ ವೈದ್ಯನಾದವನು? ಆದ್ದರಿಂದ ಹಳ್ಳಿಯಲ್ಲಿ ಭೂತ ದೆವ್ವ ಮೈಮೇಲೆ ಬಂದಿರುವವರಿಗೆ ಅವರು ಮಾಡುತ್ತಿದ್ದ ಚಿಕಿತ್ಸೆಯನ್ನೆ ಮಾಡಲು ಅನುವಾದರು: ಒಂದು ಕೋಳಿಹುಂಜವನ್ನು ಕುಂಕುಮಾದಿಗಳಿಂದ ಸಂಸ್ಕರಿಸಿ ಜೋಪಡಿಗೆ ತಂದರು. ‘ಏನಿದ್ದರೂ ಎಲ್ಲ ಆ ಹುಂಜದ ಮೇಲೆ ಬರಲಿ’ ಎಂದು ಹೇಳಿಕೊಂಡು ಅದನ್ನು ನನ್ನೆದುರು ಚಕಾ ಕಾರವಾಗಿ ಸುತ್ತಿಸಿ, ಅದರ ಚೊಟ್ಟಿಯ ಎಂದರೆ ಕೆಂಪು ಚೂಡದ ರಕ್ತವನ್ನು ನನ್ನ ಹಣಗೆ ಹಚ್ಚಿ ದೆವ್ವ ಬಿಡಿಸುವ ಉದ್ದೇಶದಿಂದ ನಾಲ್ಕಾರು ಜನರು ಪ್ರವೇಶಿಸಿದರು. ದೊಡ್ಡ ಚಿಕ್ಕಪ್ಪಯ್ಯನೆ ಮುಂದಾಳಾಗಿ ಆ ಹುಂಜವನ್ನು ಇಕ್ಕೈಗಳಿಂದಲೂ ಹಿಡಿದು ನನಗೆ ‘ಸುಳಿಯಲು’ ಮುಂದಾದರು.”[೪] ಎಂದು ತಮ್ಮ ಅನುಭವವನ್ನು ಹೇಳಿಕೊಂಡಿದ್ದಾರೆ.

ಹಿರಿತನ–ಕಿರಿಯತನ ದಾಯಾದಿ ಪಂಗಡಗಳು ಮತ್ತು ಜಾತಿ ಕ್ರಮಗಳು ಸಮಾಜದ ಸ್ಥಿತಿಗೆ ಆಧಾರವಾಗಿದ್ದವು. ಶುದ್ಧಾ–ಅಶುದ್ಧತೆಯ ಪ್ರಭಾವ, ಅಸ್ಪೃಶ್ಯತೆ ಮತ್ತು ಜಾತಿಯ ಆಧಾರದ ಮೇಲೆ ಜನರ ನಡುವಿನ ವ್ಯತ್ಯಾಸಗಳನ್ನು ಕಂಡಿದ್ದಾರೆ. ಕುವೆಂಪು ಅವರ ಬಾಲ್ಯದಲ್ಲಿನ ಪಾಠಶಾಲೆಗಳ ಸ್ಥಿತಿ ಶಿಕ್ಷಕರ ಧೋರಣೆಗಳು ಮತ್ತು ಶಿಕ್ಷಣದ ಲಭ್ಯತೆ ಸಮಾನವಾಗಿರಲಿಲ್ಲ. ಕುವೆಂಪು ಶಿಕ್ಷಣದ ಪ್ರಭಾವದಿಂದ ಮಾತ್ರವಲ್ಲದೆ ಅವರ ಮನಸ್ಸಿನಲ್ಲಿ ಸಾಮಾನ್ಯ ಜನರಿಗಾಗಿ ಹೊಸವಾದ ನೈತಿಕತೆಯ ಬೆಳಕು ಮೂಡುತ್ತದೆ. ರಾಮಾಯಣ ಮಹಾಭಾರತ ಕಾವ್ಯ ಧರ್ಮಗ್ರಂಥಗಳು ಹಳೆಯ ತಲೆಮಾರಿನ ಬದುಕಿನಲ್ಲಿ ಎಷ್ಟು ಪ್ರಭಾವ ಹೊಂದಿದ್ದವು ಎಂಬುದು ತೋರಿಸುತ್ತದೆ. ಆದರೆ ಕುವೆಂಪು ಈ ಪುರಾತನ ಪರಂಪರೆಯ ಒಳಗೆ ಹೊಸ ಆಲೋಚನೆ ತರಲು ಪ್ರಯತ್ನಿಸಿದ್ದಾರೆ.

ಬಾಲ್ಯವನ್ನು ಕುಪ್ಪಳಿಯಲ್ಲಿ ಕಳೆದಿದ್ದು ಅಲ್ಲಿನ ಪ್ರಾಥಮಿಕ ಶಾಲೆಗಳ ಸ್ಥಿತಿ, ಶಿಕ್ಷಕರ ಪಾಠದ ರೀತಿಗಳು, ಮತ್ತು ವಿದ್ಯಾರ್ಥಿಗಳ ಓದು–ಕ್ರೀಡೆಗಳ ಬಗ್ಗೆ ವಿವರಿಸಿದ್ದಾರೆ. ಸ್ಥಳೀಯ ಭಾಷೆಯಲ್ಲಿನ ಕಲಿಕೆ ಶಿಕ್ಷಕರ ಜಾತಿ ಹಾಗೂ ಶಾಲೆಯ ಮೂಲಭೂತ ಸೌಕರ್ಯಗಳ ಕೊರತೆ ಮುಂತಾದ ವಿಷಯಗಳ ಕುರಿತು ಪ್ರಸ್ತುತವಾಗುತ್ತವೆ. “ತೀರ್ಥಹಳ್ಳಿಯಲ್ಲಂತೂ ನಾಮ ಇಟ್ಟುಕೊಳ್ಳುವುದೆಲ್ಲಿ ಬಂತು? ಆದರೆ ರಾಮರಾಯರ

ಪೀಡೆ ತಡೆಯಲಾರದೆ ಒಂದು ಉಪಾಯ ಹೂಡಿದ್ದೆ. ಅವರ ಕ್ಲಾಸು ಇರುವಾಗ, ಯಾರಾದರೂ ಹಣೆಗೆ ನಾಮ ಇಟ್ಟು ಕೊಂಡು ಬಂದ ಗೆಳೆಯನನ್ನು ಹಿಡಿದು, ಅವನ ಹಣೆಗೆ ನೇರವಾಗಿ ನನ್ನ ಹಣೆಯನ್ನು ಒತ್ತಿ, ಬಲವಾಗಿ ಒತ್ತಿ, ನನ್ನ ಹಣೆಗೂ ನಾಮದ ಗುರುತು ಬೀಳುವಂತೆ ಮಾಡಿಕೊಂಡು ರಾಮರಾಯರ ತರಗತಿಗೆ ಧೈರ್ಯವಾಗಿ ಹೋಗುತ್ತಿದ್ದೆ."[೫] ರಾಮರಾಯರು ಆ ಸಂದರ್ಭದಲ್ಲಿ ಮೇಲ್ವರ್ಗದ ಶಿಕ್ಷಕರಾಗಿದ್ದರು. ಅವರು ತರಗತಿಗೆ ಬಂದರೆ ಎಲ್ಲಾ ವಿದ್ಯಾರ್ಥಿಗಳ ನಾಮವನ್ನು ಪರೀಕ್ಷಿಸುತಿದ್ದರಂತೆ ಅದಕ್ಕೆ ಕಾರಣ ಅವರ ಜಾತಿಯನ್ನು ತಿಳಿಯುವುದಕ್ಕಾಗಿ. ಕೇಳ ಜಾತಿಯವರು ಎಂದು ಗೊತ್ತಾದರೆ ಅವರನ್ನು ಶೂದ್ರರು ಎಂದು ದೂರಕ್ಕೆ ನಿಲ್ಲಿಸುತ್ತಿದ್ದರಂತೆ. ಆ ಕಾಲದಲ್ಲಿ ಜಾತಿ ಪದ್ದತಿ ಎಷ್ಟೊಂದು ಗಂಭಿರವಾಗಿತ್ತು ಎಂದು ತಿಳಿಯುತ್ತದೆ. ಕುವೆಂಪು ಅವರು ಆಧುನಿಕ ಶಿಕ್ಷಣವನ್ನು ತಾವು ಕಲಿಯುತ್ತಿದ್ದ ಸ್ಥಳಕ್ಕೆ ಇಂಗ್ಲಿಷ್ ಶಿಕ್ಷಕನು ಬಂದ ನಂತರ ಎಂದು ತಿಳಿಸುತ್ತಾರೆ. "ಉಪ್ಪರಿಗೆಯ ವಿದ್ಯಾಸಂಸ್ಥೆಗೂ ಒಬ್ಬ ಇಂಗ್ಲಿಷ್ ಬಲ್ಲ ಕ್ರೈಸ್ತ ತರುಣನನ್ನು ನಮಗೆ ಮೇಷ್ಟ್ರರನ್ನಾಗಿ ಕಳಿಸುವ ಕೃಪೆಮಾಡಿದರು: ಅವರ ಹೆಸರು ಮೋಸಸ್! ಅವರ ಆಗಮನದ ತರುವಾಯ 'ಐಗಳು' ಎಂಬ ನಾಮ ಸಂಪೂರ್ಣವಾಗಿ ಅಳಿಸಿಹೋಗಿ, 'ಮೇಷ್ಟ್ರುರು' ಎಂಬ ಬಿರುದು ಪಟ್ಟಕ್ಕೇರಿತು ಮತ್ತು ಪಾಶ್ಚಾತ್ಯ ಪ್ರಭಾವದ ಆಧುನಿಕ ಪ್ರಪಂಚಕ್ಕೆ ಪ್ರವೇಶಿಸಿತು, ನಮ್ಮ ಉಪ್ಪರಿಗೆಯ ಶಾಲೆ."[೬] ಇವರಿಗೆ ಆಧುನಿಕ ಶಿಕ್ಷಣ ದೊರೆತಿದ್ದು ತಮ್ಮ ನಾಡಿಗೆ ಇಂಗ್ಲಿಷ್ ಶಿಕ್ಷಕ ಬಂದ ನಂತರ. ಮೇಲ್ವರ್ಗದ ಸಾಂಪ್ರದಾಯಿಕ ಪದ್ದತಿಯಿಂದ ದೂರವಾಗಿ ಮೇಷ್ಟ್ರು ಎಂಬ ಹೊಸ ನಾಮ ಸೃಷ್ಟಿಗೊಂಡಿತು. ಕುವೆಂಪು ಪ್ರಾಥಮಿಕ ಶಿಕ್ಷಣವನ್ನು ಇಂಗ್ಲಿಷ್ ಭಾಷೆಯಲ್ಲಿ ಪಡೆದ ಅನುಭವವನ್ನು ವಿವರಿಸುತ್ತಾರೆ. ಈ ಶಿಕ್ಷಣದ ಮೂಲಕ ಪಾಶ್ಚಾತ್ಯ ಸಾಹಿತ್ಯ, ವಿಜ್ಞಾನ ಮತ್ತು ತತ್ವಶಾಸ್ತ್ರದ ಅಧ್ಯಯನ ಮಾಡಲು ಸಾಧ್ಯವಾಯಿತು. ಇವರ ತಂದೆ ಹಾಗೂ ಕುಟುಂಬದವರಿಗೆ "ಇಂಗ್ಲಿಷ್ ಕಲಿಯಬೇಕೆಂಬ ಆಕಾಂಕ್ಷೆಯ ಪರಿಣಾಮ ಅವರ ಮಟ್ಟಿಗೆ ಅಷ್ಟರಲ್ಲಿಯೆ ಪರವಸಾನವಾಗಿದ್ದರೂ, ಮಕ್ಕಳಾಗಿದ್ದ ನಮ್ಮ ಬದುಕಿನ ಮೇಲೆ ಅವರ ಕೈಗೂಡದ ಆ ಆಕಾಂಕ್ಷೆ ಮಹತ್ ಪ್ರಭಾವಕಾರಿಯಾಗಿ ಪರಿಣಮಿಸಿತು: ಮಕ್ಕಳನ್ನು ಓದುವುದಕ್ಕೆ ಹಾಕಬೇಕು ಎಂಬ ಪ್ರಜ್ಞೆ ಅವರಲ್ಲಿ ಉದಿಸುವಂತೆ ಮಾಡಿತ್ತು. ಅವರಿಗೆ ಬುದ್ಧಿ ಸ್ಪಷ್ಟವಾಗಿರದಿದ್ದರೂ, ಬ್ರಿಟಿಷರ ಆಳ್ವಿಕೆಯಲ್ಲಿ, ಮುಂದೆ, ಅವರ ಭಾಷೆಯಾಗಿದ್ದ ಇಂಗ್ಲಿಷನ್ನು ಕಲಿಯದಿದ್ದರೆ, ತಮ್ಮ ಮಕ್ಕಳು ಮುಂದುವರಿಯುವುದು ಸಾಧ್ಯವಿಲ್ಲ ಎಂಬ ಭಾವನೆ ಅವರ ಹೃದಯದಲ್ಲಿ ಮೂಡಿ ಮನವರಿಕೆಯಾಗಿತ್ತು. ತತ್ಫಲವಾಗಿ ನಾವು ತೀರ್ಥಹಳ್ಳಿಯ ಪೇಟೆಯ ಇಸ್ಕೂಲಿಗೆ ಸೇರುವಂತಾಯಿತು."[೭] ಕುವೆಂಪು ಮತ್ತು ಕುಟುಂಬದ ಮಕ್ಕಳಿಗಾಗಿ ಇವರ ತಂದೆ ಪೇಟೆಯಲ್ಲಿ ಮನೆ ಮಾಡಿ ಶಿಕ್ಷಣವನ್ನು ಕೊಡಿಸಿದರು.

"ಅವರು ಪದೇ ಪದೇ ಹೇಳುತ್ತಿದ್ದರಂತೆ 'ನನ್ನ ಮಗನ್ನ ಚೆನ್ನಾಗಿ ಓದಿಸ್ತೀನಿ' ಎಂದು. ಆ ಗುರಿ ಸಾಧಿಸಬೇಕಾದರೆ ಅವರು ಪೇಟೆಯಲ್ಲಿ ಇರಬೇಕಾಗುತ್ತಿತ್ತು. ಆಗ ಆ ಪ್ರಾಂತಕ್ಕೆಲ್ಲ ಸ್ಕೂಲು ಇದ್ದುದು ತೀರ್ಥಹಳ್ಳಿಯಲ್ಲಿಯೆ."[೮] ಇವರ ತಂದೆ ತನ್ನ ಮಗನಿಗಾಗಿ ಬಹಳಷ್ಟು ಶ್ರಮ ಪಟ್ಟಿದ್ದರು ಇವರು ಹಲವಾರು ಸಲ ತನ್ನ ಮಗನ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದನ್ನು ಕುವೆಂಪು ಇಲ್ಲಿ ಪ್ರಸ್ತಾಪಿಸಿದ್ದಾರೆ. ಉನ್ನತ ಶಿಕ್ಷಣಕ್ಕಾಗಿ ಅವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೋಗಿದ್ದು ಅಲ್ಲಿ ಪಡೆದ ಗಂಭೀರವಾದ ವಿದ್ಯಾಭ್ಯಾಸ ಮತ್ತು ವಿದ್ಯಾಸಂಸ್ಕೃತಿಯ ಪ್ರಭಾವವನ್ನು ಸ್ಪಷ್ಟವಾಗಿ ಬರೆಯುತ್ತಾರೆ. "ವಾಗ್ದೇವಿ ತನ್ನ ಕಂದನ ಸೃಷ್ಟಿಗೆ ಶಿಖರ

ಕಂದರಾರಣ್ಯಮಯಸಹ್ಯಾದ್ರಿಯ ತೊಟ್ಟಿಲನ್ನು ಕಟ್ಟಿ, ಅಷ್ಟಕ್ಕೆ ಸುಮ್ಮನೆ ಕೂತಿರಲಿಲ್ಲ. ಹೇಗೆಹೇಗೆಯೊ ಸನ್ನಾಹಗಳನ್ನು ಜೋಡಿಸಿ, ಯಾರಯಾರ ಮುಖಾಂತರವೋ ಕವಿಚೇತನಕ್ಕೆ ತನ್ನ ಅಮೃತಸ್ತನ್ಯಪಾನ ಮಾಡಿಸಲು ತೊಡಗಿದ್ದಳು. ಹಾಗಲ್ಲದಿದ್ದರೆ ಕಾಡಿನಮೂಲೆಯ ಕುಪ್ಪಳಿ ಎಲ್ಲಿ? ದೇವಂಗಿ ಎಲ್ಲಿ? ದೂರದ; ಬಹುದೂರದ, ಅಂದಿನ ಯಾನವೇಗದ ದೃಷ್ಟಿಯಿಂದಂತೂ ಅತ್ಯಂತ ಅಸಾಧ್ಯ ದೂರದ ಅಮೆರಿಕೆಯ ಪೋರ್ಟ್‌ಲೆಂಡ್ ಎಲ್ಲಿ? ವಿಶಾಲ ಸಾಗರಗಳಾಚೆಯ ಭೂಖಂಡದಲ್ಲಿ, ಸಂಪೂರ್ಣವಾಗಿ ಅಭಾರತೀಯ ಮಾತ್ರವಲ್ಲದೆ ಅಪ್ರಾಚ್ಯವೂ ಆದ ಅತ್ಯಂತ ವಿದೇಶೀಯ ಭಾಷೆಯಲ್ಲಿ ಹಾಡಿದ ಆ ಕವಿಯ ಗೀತೆಯೊಂದು ಕಾಲ ದೇಶಗಳ ಅಪಾರ ವಿಸ್ತಾರವನ್ನು ದಾಟಿ, ಮುಂದೆ ಕನ್ನಡದ ಮಹಾಕವಿಯಾಗಿ ಮೇರುಕೃತಿ ರಚನೆಗೆ ನಿಮಿತ್ತನಾಗುವ ಕವಿಶಿಶುವಿನ ಹೃದಯದಲ್ಲಿ ಪ್ರಸ್ತುತವಾಗಿದ್ದ ಸಾರಸ್ವತ ಪ್ರತಿಭೆಯ ಬತ್ತಿಗೆ ತನ್ನ ದಿವ್ಯಾಗ್ನಿಯ ಸೊಡರನ್ನು ಅಂಕುರಿಸಲು ಸಾಧ್ಯವಾಗುತ್ತಿತ್ತೆ?”[5] ಕುವೆಂಪು ಕನ್ನಡ ಭಾಷೆಯ ಶಕ್ತಿ ಚೈತನ್ಯವನ್ನು ಅಭಿಮಾನ ಪೂರ್ವಕವಾಗಿ ಪ್ರಶಂಸೆಯನ್ನು ಮಾಡಿದ್ದಾನೆ. ಈ ಕೃತಿಯ ಇಡೀ ಪ್ರವಾಹವೇ ಒಂದು ಆತ್ಮಪರಿಶೀಲನೆ. ತಮ್ಮ ಬಾಲ್ಯದ ತಪ್ಪುಗಳು, ಗೊಂದಲಗಳು, ಆಂತರಿಕ ಭಾವನೆಗಳನ್ನು ನಿರ್ದಯವಾಗಿ ವಿಶ್ಲೇಷಿಸುತ್ತಾರೆ. ಇದು ಕೇವಲ ನೆನಪಿನ ಲಿಪಿಯಲ್ಲ, ನಿಜವಾದ ತಾತ್ವಿಕ ಆತ್ಮಚಿಂತನೆಯ ದಾಖಲೆಯಾಗಿದೆ.

ಇವರ ಪುಸ್ತಕಪ್ರೀತಿ, ಪಾಠಶಾಲೆಯ ವಾತಾವರಣ, ಸ್ನೇಹಿತರ ಜೊತೆಗಿನ ಚರ್ಚೆ ಎಲ್ಲವೂ ಶೈಕ್ಷಣಿಕ ಬೆಳವಣಿಗೆಗೆ ನೆರವಾದವು. ಕುವೆಂಪು ಶಿಕ್ಷಣವನ್ನು ಕೇವಲ ವೃತ್ತಿಗೆ ತಯಾರಿ ಎನ್ನದೇ, ಮನುಷ್ಯನ ವೈಚಾರಿಕತೆಯನ್ನು ತಿಳಿಯಲು ಅವಶ್ಯವಾಗಿರುವ ಅಂಶಗಳನ್ನು ಹುಡುಕುತ್ತ ಸಾಗಿದರು. ಪ್ರಮುಖವಾಗಿ ಶಿಕ್ಷಣ ಸಮಾಜಮುಖಿಯಾದ ಮನಸ್ಸುಗಳನ್ನು ಬೆಳೆಸಬೇಕು ಎಂಬ ಮೌಲ್ಯಯುತ ದೃಷ್ಟಿಯನ್ನು ಹೊಂದಿದ್ದರು. ಅವರು ಆಸೆಯಿಂದ ಆಂಗ್ಲಮಾಧ್ಯಮ ಶಾಲೆಗೆ ಸೇರಿದ್ದು, ಭಾಷಾ ಬದಲಾಗುವಿಕೆಯಿಂದ ಆರಂಭದಲ್ಲಿ ಸಂಕಷ್ಟಗಳೆದುರಾದರೂ ಹತ್ತಿರದ ಉತ್ಸಾಹ, ಅಧ್ಯಯನದ ಪ್ರೀತಿ ಹಾಗೂ ಶಿಕ್ಷಕರ ಪ್ರೇರಣೆಯಿಂದ ಅವರು ಉತ್ತಮ ಸಾಧನೆ ಮಾಡಿದರು. ಈ ಭಾಗವು ಆಂಗ್ಲ ಶಿಕ್ಷಣದ ಪ್ರಭಾವವನ್ನು ತೋರಿಸುತ್ತದೆ. ಕುವೆಂಪು ಅವರ ಆತ್ಮಕಥೆಯಲ್ಲಿ ಹಲವಾರು ಶಿಕ್ಷಕರನ್ನು ಶ್ರದ್ಧೆಯಿಂದ ಉಲ್ಲೇಖಿಸುತ್ತಾರೆ. ಅವರು ಪಡೆದ ಸಂಸ್ಕೃತಿ, ವ್ಯಾಕರಣ, ಸಾಹಿತ್ಯದ ಪಾಠಗಳು ಅವರಿಗೆ ಆಧ್ಯಾತ್ಮದತ್ತ ಹಾಗೂ ಸಾಹಿತ್ಯದತ್ತ ಒಲವನ್ನು ಮೂಡಿಸುತ್ತವೆ. ಶಿಕ್ಷಕರು ಆತನ ಬದುಕಿನ ದಿಕ್ಕನ್ನು ನಿರ್ಧಾರ ಮಾಡುತ್ತಾರೆ. ಇಲ್ಲಿ ಅವರು ವಿದ್ಯಾ ಪ್ರಪಂಚದಲ್ಲಿ ತೀವ್ರ ಆಸಕ್ತಿ ಬೆಳೆಸಿಕೊಂಡರು. ಈ ಸಮಯದಲ್ಲಿ ಅವರ ತಾತ್ವಿಕ ದೃಷ್ಟಿಕೋನ, ಮಾನವೀಯತೆ ಮತ್ತು ಆಧ್ಯಾತ್ಮಿಕತೆ ಬೆಳೆಯಿತು.

ಶಿಕ್ಷಣ ಮಾನವನ ವ್ಯಕ್ತಿತ್ವ ರೂಪಿಸುವ ಮಹತ್ವದ ಸಾಧನವೆಂದು ಕುವೆಂಪು ನಂಬುತ್ತಾರೆ. ವಿದ್ಯಾರ್ಥಿಯಾಗಿದ್ದಾಗ ತಮ್ಮ ಅನುಭವಗಳ ಮೂಲಕ ಶಿಕ್ಷಣದ ಗಂಭೀರತೆಯನ್ನೂ, ಜ್ಞಾನದ ಶ್ರೇಷ್ಠತೆಯನ್ನೂ ಆತ್ಮಜೀವನದ ಚೈತನ್ಯತೆಯನ್ನು ಬೆಳಿಸಿಕೊಂಡರು. ಅದು ಒಂದು ದಾರ್ಶನಿಕ ಪ್ರವಾಹವಾಗಿದೆ ಅಲ್ಲಿ ಕುವೆಂಪು ತಮ್ಮ ಅನುಭವ ಯೋಚನೆಗಳ ಮೂಲಕ ಮಾನವತೆಯ, ಸಮಾನತೆಯ ಮತ್ತು ಜ್ಞಾನ ವಿಸ್ತಾರದ ತಾತ್ವಿಕತೆಗಳನ್ನು ಪ್ರತಿಬಿಂಬಿಸುತ್ತಾರೆ. ಈ ಚೈತನ್ಯ ಮತ್ತು ಆಧ್ಯಾತ್ಮಿಕತೆಯು ಕುವೆಂಪು ಅವರ ಎಲ್ಲಾ ಬರಹಗಳಲ್ಲಿ ಕಂಡುಬರುವಂತೆ ಈ ಕೃತಿಯಲ್ಲಿಯೂ ಮಾನವತಾವಾದದ ತೀವ್ರತೆ

ಸ್ಪಷ್ಟವಾಗುತ್ತದೆ. ಮನುಷ್ಯನು ಧರ್ಮ, ಜಾತಿ, ಭಾಷೆಗಳಿಂದ ಮೀರಿ 'ಮಾನವ' ಎಂಬ ಹುದ್ದೆಯ ಮೇಲೆ ಏರಬೇಕೆಂಬ ಕುವೆಂಪುವವರ ಆಲೋಚನೆ ಇಲ್ಲಿ ಪ್ರತಿಧ್ವನಿಸುತ್ತದೆ. ಅವರ ವಿದ್ಯಾರ್ಥಿ ಜೀವನದ ಅನುಭವಗಳಲ್ಲಿ ಶಿಕ್ಷಣವು ವ್ಯಕ್ತಿತ್ವ ನಿರ್ಮಾಣದಲ್ಲಿ ಹೇಗೆ ಸಹಾಯ ಮಾಡುತ್ತದೆ ಎಂಬುದರ ಕುರಿತು ಆಳವಾದ ಚಿಂತನೆ ಮಾಡಿದ್ದಾರೆ.

**ಕೊನೆ ಟಿಪ್ಪಣಿಗಳು**

೧. ಕುವೆಂಪು, ನೆನಪಿನ ದೋಣಿಯಲ್ಲಿ, ಪುಟ, ೧೯೯.
೨. ಅದೇ, ಪುಟ, ೨೦೦.
೩. ಅದೇ, ಪುಟ, ೫೬೭.
೪. ಅದೇ, ಪುಟ, ೮೦೬–೮೦೭.
೫. ಅದೇ, ಪುಟ, ೬೭.
೬. ಅದೇ, ಪುಟ, ೨೮.
೭. ಅದೇ, ಪುಟ, ೩೨–೩೩.
೮. ಅದೇ, ಪುಟ, ೫೮.
೯. ಅದೇ, ಪುಟ, ೧೧೩.

ಆಕರ ಗ್ರಂಥಗಳು

- ಕುವೆಂಪು, ನೆನಪಿನ ದೋಣಿಯಲ್ಲಿ, ಉದಯರವಿ ಪ್ರಕಾಶನ, ಮೈಸೂರು, ೨೦೨೪.
- ಜಿ.ಎಸ್.ಆಮೂರ, ಕುವೆಂಪು: ಯುಗದ ಕವಿ, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೭.
- ಜಿ.ಎಸ್. ಭಟ್ಟ (ಸಂ), ಕುವೆಂಪು ಅವರ ಹತ್ತು ಕೃತಿಗಳು, ತನು ಮನು ಪ್ರಕಾಶನ, ಮೈಸೂರು, ೨೦೧೨.